## ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ: ನಸಮಂ/ಸಭೆ/22/2006-07 ದಿನಾಂಕ:20-12-2006

**-: ವಿಶೇಷ ಅಧಿವೇಶನದ ನಡವಳಿಕೆಗಳು:-**

ದಿನಾಂಕ:20-12-2006ನೇ ಬುಧವಾರ ಬೆಳಿಗ್ಗೆ 11-45 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ದಿನಾಂಕ:19-12-2006ರ ವಿಶೇಷ ಸಭೆಯನ್ನು ಕಾರಣಾಂತರದಿಂದ ಮುಂದೂಡಲಾಗಿದ್ದ ಸಭೆಯನ್ನು ಮಾನ್ಯ ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆ ನಡವಳಿಕೆಗಳು.

ಹಾಜರಿ:28 ಗೈರು ಹಾಜರಿ:6+4 ಖಾಲಿ:1 ಒಟ್ಟು:35+4

**ವಿಷಯ:1:-** ಐ.ಡಿ ಎಸ್.ಎಂ.ಟಿ. ಯೋಜನೆಯಡಿಯಲ್ಲಿ ತರಕಾರಿ ಮಾರುಕಟ್ಟೆ ಸಂಕೀರ್ಣ ನಿರ್ಮಿಸಲು ಟೆಂಡರ್ ಕರೆಯ ಲಾಗಿದ್ದು, ಬಂದಿರುವ ಟೆಂಡರ್ ದರಗಳ ತುಲನಾತ್ಮಕ ಪಟ್ಟಿಯಲ್ಲಿ ನಮೂದಿಸಿರುವ ಕಡಿಮೆ ದರವನ್ನು ಒಪ್ಪಿ ಸರ್ಕಾರದ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವ ವಿಚಾರ.

**ತೀರ್ಮಾನ:1:-** ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಐ.ಡಿ ಎಸ್.ಎಂ.ಟಿ. ಯೋಜನೆಯಡಿಯಲ್ಲಿ ತರಕಾರಿ ಮಾರುಕಟ್ಟೆ ಸಂಕೀರ್ಣ ನಿರ್ಮಿಸಲು ಟೆಂಡರ್ ಕರೆಯಲಾಗಿದ್ದು, ಬಂದಿರುವ ಟೆಂಡರ್ ದರಗಳ ತುಲನಾತ್ಮಕ ಪಟ್ಟಿಯಲ್ಲಿ ನಮೂದಿಸಿರುವ ಕಡಿಮೆ ದರವನ್ನು ನಿಯಮಾನುಸಾರ ಪರಿಶೀಲಿಸಿ ಅನುಮೋದಿಸಿ ಸರ್ಕಾರದ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:2:-** ಮರಿಗೌಡ ಬಡಾವಣೆಯಲ್ಲಿ ಓವರ್ ಹೆಡ್ ವಾಟರ್ ಟ್ಯಾಂಕ್ ಪಕ್ಕದ ಖಾಲಿ ನಿವೇಶನವನ್ನು ಈ ಹಿಂದೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ನೀಡಲಾಗಿತ್ತು. ಸದರಿ ನಿವೇಶನದ ಅಳತೆ ಕಡಿಮೆ ಇರುವುದರಿಂದ ಪಶು ವೈದ್ಯ ಆಸ್ಪತ್ರೆ ಕಟ್ಟಡ ನಿವೇಶನವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಿಸಲು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ನೀಡಿರುವ ನಿವೇಶನವನ್ನು ಪಶು ವೈದ್ಯ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಸ್ಥಳ ಬದಲಾವಣೆ ಮಾಡಿ ಕೊಡುವಂತೆ ಮಂಡ್ಯ ಕ್ಷೇತ್ರದ ಮಾನ್ಯ ಶಾಸಕರು ಸೂಚಿಸಿರುವಂತೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:2:-** ವಿಷಯದಲ್ಲಿ ತಿಳಿಸಿರುವಂತೆ ಮಂಡ್ಯ ನಗರದ ಬನ್ನೂರು ರಸ್ತೆ, ಮರೀಗೌಡ ಬಡಾವಣೆ 2ನೇ ಕ್ರಾಸ್‌ನಲ್ಲಿ ಹಾಲಿ ಇರುವ ಪಶು ವೈದ್ಯ ಆಸ್ಪತ್ರೆ ಜಾಗದ ಅಳತೆ80'*(135'+165') ಅಡಿ ನಿವೇಶನವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಕ್ಕೂ,

2

ಹಾಗೂ ಓವರ್ ಹೆಡ್ ವಾಟರ್ ಟ್ಯಾಂಕ್ ಪಕ್ಕದ ಖಾಲಿ ನಿವೇಶನವನ್ನು ಈ ಹಿಂದೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಕ್ಕಾಗಿ ನೀಡಲಾಗಿದ್ದ ಅಳತೆ ________ ಅಡಿಗಳ ನಿವೇಶನವನ್ನು ಪಶು ವೈದ್ಯ ಆಸ್ಪತ್ರೆ ಕಟ್ಟಡಕ್ಕೂ ಸ್ಥಳ ಬದಲಾವಣೆ ಮಾಡಿ ಮಾಡಿಕೊಡುವ ಬಗ್ಗೆ ಕಛೇರಿಯ ಅಭಿಯಂತರರರಿಂದ ಸ್ಥಳ ಪರಿಶೀಲನೆ ಮಾಡಿಸಿ ಅವರಿಂದ ವರದಿ ಪಡೆದು ಪರಿಶೀಲಿಸಿ ನಿಯಮಾನುಸಾರ ಮಂಜೂರು ಮಾಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:3:-** ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ಮಂಡ್ಯ ನಗರಸಭೆಗೆ ಸೇರಿದ ಹಳೆ ತರಕಾರಿ ಮಾರುಕಟ್ಟೆಯನ್ನು ಕೆಡವಿ ಹೊಸ ತರಕಾರಿ ಮಾರುಕಟ್ಟೆ ಸಂಕೀರ್ಣವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿರುವುದರಿಂದ, ಸದರಿ ಹಳೆ ಮಾರುಕಟ್ಟೆಯಲ್ಲಿರುವ ವ್ಯಾಪಾರಸ್ಥರನ್ನು ಹಳೇ ತಾಲ್ಲೂಕು ಕಛೇರಿ ಆವರಣದಲ್ಲಿ ನಿರ್ಮಿಸಿರುವ ತಾತ್ಕಾಲಿಕ ಮಳಿಗೆಗಳಿಗೆ ಸ್ಥಳಾಂತರಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:3:–** ವಿಷಯದ ಬಗ್ಗೆ ಚರ್ಚಿಸಲಾಯಿತು. ಮಂಡ್ಯ ನಗರಸಭೆಗೆ ಸೇರಿದ ಹಳೆ ತರಕಾರಿ ಮಾರುಕಟ್ಟೆಯಲ್ಲಿರುವ ಅಧಿಕೃತವಾಗಿ ವ್ಯಾಪಾರಸ್ಥರನ್ನು ಹಳೇ ತಾಲ್ಲೂಕು ಕಛೇರಿ ಆವರಣದಲ್ಲಿ ನಿರ್ಮಿಸಿರುವ ತಾತ್ಕಾಲಿಕ ಮಳಿಗೆಗಳಿಗೆ ಸ್ಥಳಾಂತರಿಸುವ ಸಂಬಂಧ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಹಳೇ ಮಾರುಕಟ್ಟೆಯಲ್ಲಿರುವ ಅಧಿಕೃತ ವ್ಯಾಪಾರಸ್ಥರನ್ನು ತೆರವುಗೊಳಿಸಿ ತಾತ್ಕಾಲಿಕ ಮಳಿಗೆಗಳಿಗೆ ಸ್ಥಳಾಂತರಿಸಲು ಕಛೇರಿಯ ಅಧಿಕಾರಿಗಳು ಆರಕ್ಷಕರ ರಕ್ಷಣೆಯನ್ನು ಪಡೆದು ಶೀಘ್ರವಾಗಿ ಕ್ರಮವಹಿಸುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:4:–** ನಗರಸಭೆ ವ್ಯಾಪ್ತಿಯ ಅಶೋಕ ನಗರ 2ನೇ ಮುಖ್ಯ ರಸ್ತೆ ಮತ್ತು ತರಕಾರಿ ಮಾರುಕಟ್ಟೆ ಮುಂಭಾಗದ ರಸ್ತೆ ಈ ಹಿಂದೆ ಅಭಿವೃದ್ಧಿಪಡಿಸಲು ಟೆಂಡರ್ ಕರೆದಿದ್ದು ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ರಸ್ತೆಯ ಕೆಳಭಾಗ ತುಂಬಾ ಮೃದು ಮಣ್ಣಿನಿಂದ ಕೂಡಿದ್ದು ಸದರಿ ರಸ್ತೆಗೆ ಹೆಚ್ಚುವರಿಯಾಗಿ ರಸ್ತೆ ಅಗೆದು ಮೃದು ಮಣ್ಣನ್ನು ಹೊರ ತೆಗೆದು ಎಂಬ್ಯಾಕ್‌ಮೆಂಟ್ ಮಾಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಬಗ್ಗೆ.

**ತೀರ್ಮಾನ:4:–** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ಹಾಗೂ ಇನ್ನು ಮುಂದೆ ಈ ರೀತಿ ಪದೇ ಪದೇ ಅಂದಾಜು ಪಟ್ಟಿಯನ್ನು ಪರಿಷ್ಕರಿಸುವ ಬದಲು ಪ್ರಾರಂಭದ ಹಂತದಲ್ಲಿಯೇ ಪರಿಶೀಲಿಸಿ ಅಗತ್ಯ ಕ್ರಮ ವಹಿಸಿ ಸೂಕ್ತ ಅಂದಾಜು ತಯಾರಿಸಿ ಸಭೆಗೆ ಅವಶ್ಯ ಮಾಹಿತಿಗಳನ್ನು ಒದಗಿಸುವಂತೆ ಅಭಿಯಂತರರಿಗೆ ಸೂಚನೆ ನೀಡಿ, ತರಕಾರಿ ಮಾರುಕಟ್ಟೆ ಮುಂಭಾಗದ ರಸ್ತೆ ಅಭಿವೃದ್ಧಿಗೆ ಹೆಚ್ಚುವರಿ ಅಂದಾಜು ಮೊತ್ತ ರೂ.4.15ಲಕ್ಷಗಳನ್ನು ಹಾಗೂ ಅಶೋಕನಗರ 2ನೇ ಮುಖ್ಯ ರಸ್ತೆಗೆ ಹೆಚ್ಚುವರಿ ಅಂದಾಜು ಮೊತ್ತ ರೂ.8.80 ಲಕ್ಷಗಳನ್ನು ಮಂಜೂರುಮಾಡಿ ಕಾಮಗಾರಿಗಳನ್ನು ಶೀಘ್ರವಾಗಿ ನಿರ್ವಹಿಸುವುದೆಂದು ಒಪ್ಪಿ ತೀರ್ಮಾನಿಸಲಾಯಿತು..

**ವಿಷಯ:5:–** ದಿನಾಂಕ:13–12–2006ರಂದು 31 ಜನ ಮಾನ್ಯ ನಗರಸಭಾ ಸದಸ್ಯರು ವಿ.ವಿ.ರಸ್ತೆ ಯಲ್ಲಿರುವ ನಗರಸಭಾ ನಿಧಿಯಿಂದ ನಿರ್ಮಿಸಿರುವ ನೆಲ ಅಂತಸ್ತಿನ 1 ರಿಂದ 6 ಸಂಖ್ಯೆ ಮಳಿಗೆ ಗಳ ಬಾಡಿಗೆ ಅವಧಿಯನ್ನು ದಿನಾಂಕ:1–4–2006 ರಿಂದ 31–3–2011ರವರೆಗೆ ನವೀಕರಿಸಿಕೊಡು ವಂತೆ ಒಪ್ಪಿ ಸಹಿ ಮಾಡಿ ನೀಡಿರುವ ಪತ್ರದ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:5:–** ವಿಷಯದ ಬಗ್ಗೆ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ.ಎಂ.ಸಿ.ಮಹಾಲಿಂಗುರವರು ಅಂಗಡಿ ಮಳಿಗೆಗಳ ಬಗ್ಗೆ ವಿವರಣೆಯನ್ನು ನೀಡುವಂತೆ ನಗರಸಭಾಧ್ಯಕ್ಷರನ್ನು ಕೋರಿದರು. ಮಾನ್ಯ ಅಧ್ಯಕ್ಷರು ಮಾಡನಾಡುತ್ತಾ, ಈ ಹಿಂದೆ ಎರಡು ಬಾರಿ ಸದರಿ ಮಳಿಗೆಗಳ ಬಾಡಿಗೆಯನ್ನು ಹೆಚ್ಚಿಸಿ ಬಾಡಿಗೆ ಅವಧಿಯನ್ನು ಮುಂದುವರೆಸಲಾಗಿದೆ. ವಿವರ ಈ ಕೆಳಕಂಡಂತೆದೆ.

1) ದಿನಾಂಕ:1–4–1991ರಿಂದ 31–3–1996ರವರೆಗೆ 5 ವರ್ಷಗಳಿಗೆ ಬಾಡಿಗೆಗೆ ನೀಡಲಾಗಿದೆ. ನಂತರ ,
2) ಕೌನ್ಸಿಲ್ ಅಧಿವೇಶನ ದಿನಾಂಕ:29–7–1996ರ ನಿರ್ಣಯ ಸಂಖ್ಯೆ:4(ಎ)ರಂತೆ ಮತ್ತೆ 5 ವರ್ಷಗಳಿಗೆ ದಿನಾಂಕ:1–4–1996 ರಿಂದ 31–3–2001ರವರೆಗೆ ಮುಂದುವರೆಸಲಾಗಿದೆ. ಮತ್ತೆ,
3) ದಿನಾಂಕ: 16–10–2001ರ ಆಡಳಿತಾಧಿಕಾರಿಯವರ ಸಭೆ ನಿರ್ಣಯ ಸಂಖ್ಯೆ:7ರಂತೆ ದಿನಾಂಕ:1–4–2001 ರಿಂದ 31–3–2006 ರವರೆಗೆ ಶೇ.25% ರಷ್ಟು ಬಾಡಿಗೆ ದರವನ್ನು ಹೆಚ್ಚಿಸಿ ಬಾಡಿಗೆ ಅವಧಿಯನ್ನು ಮುಂದುವರೆಸಿರುತ್ತಾರೆ.

ಅಲ್ಲದೆ ಹಾಲಿ ಇರುವ ವಾಣಿಜ್ಯ ಮಳಿಗೆಗಳ ಬಾಡಿಗೆದಾರರು ಮಾಹೆಯಾನ ಬಾಡಿಗೆಯನ್ನು ಕ್ರಮವಾಗಿ ಪಾವತಿಸಿಕೊಂಡು ಬಂದಿರುತ್ತಾರೆ. ಸದರಿ ಬಾಡಿಗೆದಾರರ ಅವಧಿಯು ದಿನಾಂಕ:31–3–2006ಕ್ಕೆ ಮುಕ್ತಾಯಗೊಂಡಿರುವುದರಿಂದ ಸದರಿ ಮಳಿಗೆ ಬಾಡಿಗೆದಾರರು ಕಛೇರಿಗೆ ಮನವಿ ಸಲ್ಲಿಸಿ ಮಳಿಗೆಗಳನ್ನು ಬಾಡಿಗೆ ಅವಧಿಯನ್ನು ಮುಂದುವರೆಸಿಕೊಡುವಂತೆ ಕೋರಿರುತ್ತಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಪೌನಿ/ಜಿಪಿಎಸ್/ಸಿಆರ್/109/2006–07 ದಿನಾಂಕ:14–12–2006ರ ಸುತ್ತೋಲೆಯನ್ನು ಸಭೆಯಲ್ಲಿ ಓದಲಾಯಿತು.

ಮಾನ್ಯ ಸದಸ್ಯರಾದ ಶ್ರೀ.ಎಂ.ಸಿ.ಮಹಾಲಿಂಗುರವರು ಸುತ್ತೋಲೆಯಲ್ಲಿ ತಿಳಿಸಿರುವ ರೀತ್ಯಾ ನಗರಸಭಾ ಆಸ್ತಿ ಇತರೆಗಳನ್ನು ಹೊಸದಾಗಿ ಮಾರಾಟ ಮಾಡುವುದನ್ನಾಗಲೀ, ಗುತ್ತಿಗೆಗೆ ನೀಡುವುದನ್ನಾಗಲೀ ಅಥವಾ ಹರಾಜನ್ನಾಗಲೀ ಮಾಡುತ್ತಿರುವುದಿಲ್ಲ. ವಿ.ವಿ.ರಸ್ತೆಯಲ್ಲಿರುವ ವಾಣಿಜ್ಯ ಮಳಿಗೆ ಕಟ್ಟಡದಲ್ಲಿನ ನೆಲ ಅಂತಸ್ತಿನ ಕ್ರಮ ಸಂಖ್ಯೆ:1 ರಿಂದ 6ರವರೆಗಿನ ಮಳಿಗೆಗಳನ್ನು ನಗರಸಭಾ ನಿಧಿಯಿಂದ ನಿರ್ಮಿಸಲಾಗಿರುವುದರಿಂದ ಪ್ರಾರಂಭದಿಂದಲೇ ಇರುವ ಬಾಡಿಗೆದಾರರಿಗೇ

ಹಿಂದಿನಿಂದಲೂ ಬಾಡಿಗೆಯನ್ನು ಹೆಚ್ಚಿಸಿ ಬಾಡಿಗೆ ಅವಧಿಯನ್ನು ಮುಂದುವರೆಸಿಕೊಂಡು ಬಂದಿರುವುದರಿಂದ, ಮಳಿಗೆಗಳ ಅವಧಿಯನ್ನು ಮುಂದಿನ ಐದು(5) ವರ್ಷಗಳ ಅವಧಿಗೆ ದಿನಾಂಕ:1–4–2006 ರಿಂದ 31–3–2011ರವರೆಗೆ ಶೇಕಡ 30% ರಷ್ಟು ಬಾಡಿಗೆ ದರವನ್ನು ಹೆಚ್ಚಿಸಿ ಹಾಲಿ ಇರುವ ಬಾಡಿಗೆದಾರರನ್ನೇ ಮುಂದುವರೆಸಬಹುದೆಂದು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರಾದ ಶ್ರೀ.ಬಿ.ಎಂ.ಬಾಷರವರು ಮಾತನಾಡುತ್ತಾ, ಮೇಲ್ಕಂಡಂತೆ ಈಗಾಗಲೇ ಸದರಿ ಮಳಿಗೆಗಳ ಬಾಡಿಗೆ ಅವಧಿಯನ್ನು ಎರಡು ಬಾರಿ ನವೀಕರಿಸಿರುವುದರಿಂದಲೂ ಹಾಗೂ ಹಾಲಿ ಬಾಡಿಗೆದಾರರನ್ನು ತೆರವುಗೊಳಿಸಿ ಬಹಿರಂಗ ಹರಾಜು ಮಾಡಲು ಕ್ರಮ ಕೈಗೊಂಡಲ್ಲಿ, ಸದರಿ ಮಳಿಗೆ ಬಾಡಿಗೆದಾರರು ನ್ಯಾಯಾಲಯಕ್ಕೆ ಮೊರೆ ಹೋಗುವ ಸಾಧ್ಯತೆಗಳಿರುತ್ತದೆ. ಸದರಿ ಮಳಿಗೆ ಬಾಡಿಗೆದಾರರು ಕ್ರಮವಾಗಿ ಬಾಡಿಗೆಯನ್ನು ಪಾವತಿಸಿಕೊಂಡು ಬರುತ್ತಿರುವುದರಿಂದ, ಬಾಡಿಗೆದಾರರ ಕೋರಿಕೆಯನ್ನು ಪರಿಗಣಿಸಿ, ನಗರಸಭಾ ಹಿತದೃಷ್ಟಿಯಿಂದ ಹಾಲಿ ಇರುವ ಬಾಡಿಗೆದಾರರುಗಳಿಗೆ ಶೇಕಡ 25%ರಷ್ಟು ಮಾಹೆಯಾನ ಬಾಡಿಗೆಯನ್ನು ಹೆಚ್ಚಿಗೆ ಮಾಡಿ ಬಾಡಿಗೆ ಅವಧಿಯನ್ನು ಐದು ವರ್ಷಗಳಿಗೆ ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಸದಸ್ಯರಾದ ಶ್ರೀ.ಬಿ.ಎಂ.ಬಾಷರವರ ಅಭಿಪ್ರಾಯವನ್ನು ಸದಸ್ಯರುಗಳಾದ ಶ್ರೀ.ಎಂ.ಮಹದೇವು (ಕಿಟ್ಟಿ)ರವರು ಮತ್ತು ಶ್ರೀ.ರವಿ ಶಂಕರೇಗೌಡರವರುಗಳು ಅನುಮೋದಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ:ಎಂ.ಗೀತಾ ರಾಮಕೃಷ್ಣರವರು ಪೌರಾಡಳಿತ ನಿರ್ದೇಶನಾಲಯದಿಂದ ಬಂದಿರುವ ಸುತ್ತೋಲೆ ರೀತ್ಯಾ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಒತ್ತಾಯಿಸಿ ಮನವಿ ಪತ್ರ ನೀಡಿದರು.

ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ.ಎಂ.ಬಿ.ಫಣೀಂದ್ರ ಕುಮಾರ್‌ರವರು ಬಹಿರಂಗ ಹರಾಜು ಮೂಲಕ ಬಿಲೇ ಪಡಿಸಿ ಗುಡ್‌ವಿಲ್ ಪಡೆದು ಬಾಡಿಗೆಗೆ ನೀಡಬಹುದೆಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು.

ಅಂತಿಮವಾಗಿ ಸದಸ್ಯರಾದ ಶ್ರೀ.ಬಿ.ಎಂ.ಬಾಷರವರ ಸೂಚನೆ ಹಾಗೂ ಶ್ರೀ.ಎಂ.ಮಹದೇವು(ಕಿಟ್ಟಿ)ರವರು, ಶ್ರೀ.ರವೀಶಂಕರೇಗೌಡರವರು ಮತ್ತು ಶ್ರೀ.ಎಂ.ಸಿ.ಮಹಾಲಿಂಗುರವರುಗಳ ಅನುಮೋದನೆಯಂತೆ ಶೇ.30%ರಷ್ಟು ಬಾಡಿಗೆ ದರವನ್ನು ಹೆಚ್ಚಿಸಿ ದಿನಾಂಕ:1–4–2006 ರಿಂದ 31–3–2011 ರವರೆಗೆ ಐದು (5) ವರ್ಷಗಳಿಗೆ ಮಳಿಗೆ ಬಾಡಿಗೆ ಅವಧಿಯನ್ನು ಮುಂದುವರೆಸಿಕೊಡುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

**ಸಹಿ:**
**(ಸಿ.ವಿಜಯಲಕ್ಷ್ಮಿ)**
**ಅಧ್ಯಕ್ಷರು,**
**ನಗರಸಭೆ, ಮಂಡ್ಯ.**

**"ನಕಲು"**
**ಸಹಿ:**
**ಪೌರಾಯುಕ್ತರು,**
**ನಗರಸಭೆ, ಮಂಡ್ಯ.**